# ಶರಣು ಶರಣಯ್ಯಾ ಶರಣ್ಯಾ...

■ ಪದ್ಮನಾಭ ಭಟ್

'ನಾತಿಚರಾಮಿ' ಇತ್ತೀಚೆಗೆ ಕನ್ನಡದಲ್ಲಿ ಗಮನಸೆಳೆದ ಸಿನಿಮಾ. ಮಹಿಳೆಯ ಮನೋಲೋಕದ ತಲ್ಲಣಗಳನ್ನು ಸೆರೆಹಿಡಿಯುವ ಈ ಪ್ರಯತ್ನದಲ್ಲಿ ನಾಯಕಿ ಗೌರಿ ಮಹೇಶ್ ಪಾತ್ರದಷ್ಟೇ ಗಮನ ಸೆಳೆದ ಇನ್ನೊಂದು ಪಾತ್ರ ಸುಮಾ ಎಂಬ ಗೃಹಿಣಿಯದ್ದು. ಒಲ್ಲದ ಗಂಡನ ಒಲಿಸಿಕೊಳ್ಳಲು ಹೆಣಗುವ – ಕೊನೆಗೆ ಮನೆಯೊಳಗಣ ಜಗತ್ತಿನಲ್ಲಿಯೇ ತನ್ನ ಅಸ್ಮಿತೆಯನ್ನು ಹುಡುಕಿಕೊಂಡು ದೃಢಗೊಳ್ಳುವ ಹೆಣ್ಣುಮಗಳ ಪಾತ್ರಕ್ಕೆ ಜೀವ ತುಂಬಿದವರು ಶರಣ್ಯಾ.

'ನಾತಿಚರಾಮಿ' ಶರಣ್ಯಾ ಅಭಿನಯದ ಮೊದಲ ಸಿನಿಮಾ. ಹಾಗಂತ ಇವರಿಗೆ ಕ್ಯಾಮೆರಾ ಎದುರಿಸುವುದು ಹೊಸದೇನಲ್ಲ. ಕಳೆದ ಐದಾರು ವರ್ಷಗಳಿಂದ ಕಿರುತೆರೆ ಧಾರಾವಾಹಿ–ರಿಯಾಲಿಟಿ ಷೋಗಳ ಮೂಲಕ ಮಾಯಾಪೆಟ್ಟಿಗೆಯಲ್ಲಿ ಅವರು ಮಿಂಚುತ್ತ ಬಂದಿದ್ದಾರೆ.

ರಾಯಚೂರು ಜಿಲ್ಲೆಯ ಲಿಂಗಸೂರಿನವರಾದ ಶರಣ್ಯಾ ಅವರಿಗೆ ಬಾಲ್ಯದಿಂದಲೂ ಸಂಗೀತದ ಆಲಾಪ ಕೇಳಿದರೆ ಮನ ಉತ್ಸಾಹದಿಂದ ಕುಣಿಯುತ್ತಿತ್ತು. ಹಾಡಲು ನಿಂತರೆ ಸುತ್ತಲಿನ ಜಗತ್ತೇ ಮರೆತುಹೋಗುತ್ತಿತ್ತು. 'ಜೀ' ಕನ್ನಡ ವಾಹಿನಿಯ 'ಸರಿಗಮಪ' ರಿಯಾಲಿಟಿ ಷೋ ಮೂಲಕ ಕಿರುತೆರೆಯನ್ನು ಪ್ರವೇಶಿಸಿದರು. ಆ ಕಾರ್ಯಕ್ರಮ ಅವರಿಗೆ ಹೊಸ ಅವಕಾಶಗಳ ವಿಸ್ತಾರ ಬಯಲಿಗೆ ದಿಕ್ಸೂಚಿಯಾಯಿತು. ಅಲ್ಲಿಂದ 'ಸಪ್ತಸ್ವರ' ಎಂಬ ಇನ್ನೊಂದು ರಿಯಾಲಿಟಿ ಷೋ ಮಾಡಿದರು. ಉದಯ ವಾಹಿನಿಯ 'ಸೂಪರ್ ಕುಟುಂಬ' ರಿಯಾಲಿಟಿ ಷೋದಲ್ಲಿ ಭಾಗವಹಿಸಿ ಗೆದ್ದರು.



ರಿಯಾಲಿಟಿ ಷೋಗಳಲ್ಲಿ ಮಿಂಚುತ್ತಿದ್ದ ಅವರಿಗೆ ಧಾರಾವಾಹಿ ನಟನೆಗೆ ಕರೆಬರಲು ಹೆಚ್ಚು ಕಾಲವೇನೂ ಬೇಕಾಗಲಿಲ್ಲ. ಉದಯ ವಾಹಿನಿಯಲ್ಲಿಯೇ ಪ್ರಸಾರವಾಗುತ್ತಿದ್ದ 'ಕಾರ್ತೀಕ ದೀಪ' ಅವರು ನಟಿಸಿದ ಮೊದಲ ಧಾರಾವಾಹಿ. 'ಕಾರ್ತೀಕ ದೀಪ ಧಾರಾವಾಹಿಯ ನಾಯಕಿ ಸಂಗೀತಗಾರ್ತಿಯೂ ಆಗಿರುತ್ತಾಳೆ. ಹಾಗಾಗಿ ಸಂಗೀತ ಗೊತ್ತಿರುವವರಿಗಾಗಿ ಅವರು ಹುಡುಕುತ್ತಿದ್ದರು. ರಿಯಾಲಿಟಿ ಷೋಗಳಲ್ಲಿ ನನ್ನನ್ನು ನೋಡಿ ನಟಿಸುತ್ತೀರಾ ಎಂದು ಕೇಳಿದರು. ಆದರೆ ನನಗೆ ನಟನೆ ಮಾಡುತ್ತೇನೆ ಎಂಬ ಧೈರ್ಯ ಇರಲಿಲ್ಲ. ಒಪ್ಪಿಕೊಳ್ಳಲು ಹಿಂಜರಿದೆ. ಕೊನೆಗೆ ನಿರ್ದೇಶಕರು ಮಾರ್ಗದರ್ಶನ ಮಾಡುವ ಧೈರ್ಯ ನೀಡಿದ್ದರಿಂದ ಒಪ್ಪಿಕೊಂಡೆ' ಎಂದು ಮೊದಲ ಅವಕಾಶದ ಮೆಲುಕು ಹಾಕುತ್ತಾರೆ.

'ಕಾರ್ತೀಕ ದೀಪ'ದ ಮೂಲಕ ಅವರೊಳಗೆ ಹೊತ್ತಿಕೊಂಡ ನಟನೆಯ ನಂದಾದೀಪ ಮತ್ತೆಂದೂ ಆರಲೇ ಇಲ್ಲ. 'ಮಹಾನವಮಿ', 'ಪ್ರೀತಿ ಪ್ರೇಮ', 'ಅಳಗುಳಿ ಮನೆ', 'ಸಾಯಿಬಾಬಾ', 'ಕರ್ಪೂರದ ಗೊಂಬೆ', 'ಸಪ್ತವ್ಯೂಹ', 'ಚಕ್ರತೀರ್ಥ', 'ಗಂಗಾ', 'ಮಂಗ್ಳೂರ್ ಹುಡುಗಿ ಹುಬ್ಬಳ್ಳಿ ಹುಡ್ಗ' ಹೀಗೆ ಅನೇಕ ಧಾರಾವಾಹಿಗಳಲ್ಲಿ ಅವರು ಕೆಲಸ ಮಾಡಿದ್ದಾರೆ. 'ಗಂಗಾ ಧಾರಾವಾಹಿಯ ಪಾತ್ರ ನನಗೆ ತುಂಬ ಹೆಸರು ತಂದುಕೊಟ್ಟಿತು' ಎಂದು ನೆನಪಿಸಿಕೊಳ್ಳುತ್ತಾರೆ.

ಧಾರಾವಾಹಿಗಳ ಮೂಲಕ ನಟನೆಯ ರುಚಿ ಅರಿತುಕೊಂಡ ಶರಣ್ಯಾಗೆ ಬೆಳ್ಳಿತೆರೆಯ ಮೇಲೆ ಮಿಂಚಬೇಕು ಎಂಬ ಆಸೆಯೂ ಇದ್ದೇ ಇತ್ತು. ಅದಕ್ಕ ಇಂಬು ಸಿಕ್ಕಿದ್ದು 'ನಾತಿಚರಾಮಿ' ಸಿನಿಮಾ ಮೂಲಕ. 'ಮಂಸೋರೆ ನಿರ್ದೇಶನದ ಮೊದಲ ಸಿನಿಮಾ 'ಹರಿವು'ದಲ್ಲಿಯೇ ನಾನು ನಟಿಸಬೇಕಾಗಿತ್ತು. ಆಗ ಧಾರಾವಾಹಿಗಳಲ್ಲಿ ಬಿಜಿಯಾಗಿದ್ದರಿಂದ ಸಾಧ್ಯವಾಗಲಿಲ್ಲ. ಅದರ ಕುರಿತು ಬೇಸರ ಇದ್ದೇ ಇತ್ತು. ಆದರೆ ನಾತಿಚರಾಮಿ ಸಿನಿಮಾ ಆ ಬೇಸರವನ್ನು ನೀಗಿಸಿದೆ. ಮಂಸೋರೆ ಕರೆದು ಸುಮಾ ಎಂಬ ಪಾತ್ರ ಕೊಟ್ಟಾಗ ಪಾತ್ರ ಮತ್ತು ಸಿನಿಮಾ ಕಥೆ ಎರಡನ್ನೂ ಇಷ್ಟಪಟ್ಟಿದ್ದೆ. ಹಾಗಾಗಿಯೇ ಒಪ್ಪಿಕೊಂಡೆ' ಎಂದು ವಿವರಿಸುತ್ತಾರೆ ಶರಣ್ಯಾ.

ಧಾರಾವಾಹಿ ನಟನೆಗೆ ಒಗ್ಗಿಹೋಗಿದ್ದ ಅವರಿಗೆ ಈ ಚಿತ್ರದಲ್ಲಿ ಸಹಜವಾಗಿ ನಟಿಸುವುದು ದೊಡ್ಡ ಸವಾಲು ಅನಿಸಿತ್ತಂತೆ. ನಿರ್ದೇಶಕರ ಮಾರ್ಗದರ್ಶನ, ಜೊತೆಗೆ ಹಲವು ಸಿನಿಮಾಗಳನ್ನು ನೋಡಿ ಪಾತ್ರಕ್ಕೆ ಎಷ್ಟು ಬೇಕೋ ಅಷ್ಟು ಮಾತ್ರವೇ ಎಕ್ಸ್‌ಪ್ರೆಶನ್ ಕೊಡಲು ಕಲಿತುಕೊಂಡೆ ಎನ್ನುತ್ತಾರೆ. ಈ ಪಾತ್ರಕ್ಕೆ ಬರುತ್ತಿರುವ ಪ್ರಶಂಸೆಯಿಂದಲೂ ಅವರಿಗೆ ಖುಷಿಯಾಗಿದೆ.

ಮುಂದೆ ಎಂಥ ಪಾತ್ರಗಳಲ್ಲಿ ನಟಿಸಬೇಕು ಎಂಬ ಆಸೆ ಇದೆ ಎಂದು ಕೇಳಿದರೆ 'ನನ್ನಂಥಲ್ಲದ ಬೇರೆ ಬಗೆಯ ಪಾತ್ರಗಳು' ಎಂದು ಉತ್ತರಿಸುತ್ತಾರೆ ಅವರು. 'ನಾನು ಗ್ಲ್ಯಾಮರ್ ಮಾತ್ರವನ್ನೇ ನೆಚ್ಚಿಕೊಂಡವಳಲ್ಲ. ನಾತಿಚರಾಮಿಯಂಥ ಸಿನಿಮಾ ಮೂಲಕ ಚಿತ್ರರಂಗ ಪ್ರವೇಶಿಸಿದ್ದೇನಿ ಅಂದಮೇಲೆ ಮುಂದೆಯೂ ಅಂಥ ಪರ್ಫಾರ್ಮೆನ್ಸ್ ಪ್ರಧಾನವಾಗಿರುವ ಪಾತ್ರಗಳನ್ನೇ ಮಾಡಿಕೊಂಡು ಹೋಗಬೇಕಲ್ಲವೇ?' ಎಂದು ಮರುಪ್ರಶ್ನಿಸುವ ಅವರಲ್ಲಿ ನಟನೆಯ ಜತೆಗೆ ಗಾಯನಯಾನವನ್ನೂ ಮುಂದುವರಿಸಿಕೊಂಡು ಹೋಗುವ ಸಂಕಲ್ಪವಿದೆ. ■